ಅದನ್ನು ಕೊಡುವಂಥ ವ್ಯವಸ್ಥೆಯನ್ನು ಮಾಡುತ್ತೇವೆಂದು ತಮ್ಮ ಮುಖೇನ ಸದನಕ್ಕೆ ತಿಳಿಸಬಯಸುತ್ತೇನೆ.

ಸಭಾಧ್ಯಕ್ಷರು: ಯು.ಟಿ.ಖಾದರ್‌ರವರೆ ಬೇಡ,

ಶ್ರೀ ಯು.ಟಿ.ಖಾದರ್: ಖೈದಿಗಳು ಜೈಲಿನಲ್ಲಿ ಆರಾಮವಾಗಿ ಕುಳಿತುಕೊಂಡು ಮೊಬೈಲ್ ಫೋನಿನ ಮೂಲಕ ಮಾತನಾಡಿ ಮಾಹಿತಿ ಪಡೆಯುವುದು ನಡೆಯುತ್ತದೆ ಇದಕ್ಕೆ ಕಡಿವಾಣ ಹಾಕಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಸಭಾಧ್ಯಕ್ಷರು: ಆಯಿತು, ಶ್ರೀಕಾಂತ್ ಕೊನೆಯ ಪ್ರಶ್ನೆಯನ್ನು ಕೇಳಿ.

ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬರಾವ್: ಸನ್ಮಾನ್ಯ ಮಂತ್ರಿಗಳ ಗಮನಕ್ಕೆ ತರುವ ವಿಷಯವೊಂದಿದೆ, ಜೈಲಿನಲ್ಲಿ ಮಹಿಳಾ ಖೈದಿಗಳ ವಿಭಾಗವಿದ್ದು ಮಹಿಳಾ ಖೈದಿಗಳೂ ಕೂಡ ಆ ಜೈಲಿಗೆ ಬರುತ್ತಾರೆ, ಅಲ್ಲಿ ಒಬ್ಬರಾದರೂ ಮಹಿಳಾ ಕಾನಸ್ಟೇಬಲ್ ಇಲ್ಲ, ಆ ಜೈಲನ್ನು ಹೇಗೆ ನಡೆಸಲಿಕ್ಕೆ ಸಾಧ್ಯ? ತಕ್ಷಣ ಮಹಿಳಾ ಸಿಬ್ಬಂದಿಯನ್ನು ಒದಗಿಸಬಹುದೇ ಎಂಬುದೊಂದು ಪ್ರಶ್ನೆ. ಇನ್ನೊಂದು ಪ್ರಶ್ನೆ ಏನೆಂದರೆ ರಸ್ತೆಯಿಂದ ಅರ್ಧ ಕಿ.ಮೀ ಅಂತರದಲ್ಲಿರುವ ಈ ಕಟ್ಟಡಕ್ಕೆ ಅಲ್ಲಿಯವರೆಗೆ ಬೀದಿ ದೀಪಗಳು ವ್ಯವಸ್ಥೆಯಾಗಬೇಕು ಮತ್ತು ಹೊರಗಡೆ ಒಂದು out post police station ಮಾಡಬೇಕೆನ್ನುವ ಪ್ರಯತ್ನ ಆಗಬೇಕು. ಇದನ್ನು ಮಾಡಬೇಕೆಂದು ಸನ್ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

ಸಭಾಧ್ಯಕ್ಷರು: ಇವೆಲ್ಲಾ ಸಣ್ಣ ಸಣ್ಣ ವಿಷಯಗಳು, ಇದನ್ನು ಸದನದಲ್ಲಿ ಕೇಳಿದರೆ ಹೇಗೆ? ಅಲ್ಲಿಯೇ ನಿಂತು ಅವೆಲ್ಲಾ ನೀವು ಮಾಡಿಸಬೇಕು.

ಶ್ರೀ ಉಮೇರ್ಶ ವಿ.ಕತ್ತಿ: ಈಗಾಗಲೇ ಬಂಧಿಖಾನೆ ಇಲಾಖೆಯಲ್ಲಿ ಸಿಬ್ಬಂದಿ ಕೊರತೆಯಿರುವುದು ನಿಜ, ಅರ್ಧದಷ್ಟು ಸಿಬ್ಬಂದಿ ಕೊರತೆಯಿಂದ ಇದನ್ನು ಸರಿಯಾಗಿ ನಡೆಸಲಿಕ್ಕಾಗುತ್ತಿಲ್ಲ. ಇತ್ತೀಚೆಗೆ ಹಣಕಾಸು ಇಲಾಕೆಯಿಂದ ಕೆಲವು ಸಿಬ್ಬಂದಿಯನ್ನು ನೇಮಕಾತಿ ಮಾಡಲಿಕ್ಕೆ ಅಪ್ರೂವಲ್ ಕೊಟ್ಟ ಮೇಲೆ ಬರುವ ಎರಡು ತಿಂಗಳಲ್ಲಿ 350 ಜನರನ್ನು ನೇಮಕ ಮಾಡುತ್ತಿದ್ದೇವೆ, ನಂತರ ಅವರು ಹೇಳಿದಂತಹ ಮಹಿಳಾ ಪೊಲೀಸ್ ಸಿಬ್ಬಂದಿಯಾಗಿರಬಹುದು ಅಥವಾ ಆ ಜೈಲಿಗೆ ಬೇಕಾಗಿರುವಂಥ ಸಿಬ್ಬಂದಿಯಾಗಿರಬಹುದು ಕೊಡುವಂಥ ವ್ಯವಸ್ಥೆ ಮಾಡುತ್ತೇವೆ. ಅದರ ಜೊತೆಗೆ ಆ ಪೊಲೀಸ್ ಸ್ಟೇಷನ್ ನಿರ್ಮಾಣ, ಬೀದಿ ದೀಪಗಳ ಬಗ್ಗೆ ಕೇಳುತ್ತಿದ್ದಾರೆ ಸಂಬಂಧಪಟ್ಟ ಜಮಖಂಡಿ ನಗರಸಭೆಗೆ ಇಲಾಖೆಯಿಂದ ವಿನಂತಿ ಮಾಡಿ ವಿದ್ಯುದ್ದೀಪ ಹಾಕಲಿಕ್ಕೆ ಆದೇಶ ಕೊಡುತ್ತೇವೆ ಹಾಗೆ ಅಲ್ಲಿ ಪೊಲೀಸ್ ಸ್ಟೇಷನ್ ಕಟ್ಟಲಿಕ್ಕೆ ಗೃಹ ಸಚಿವರನ್ನು ವಿನಂತಿಸುತ್ತೇವೆ.

ಹಣ್ಣು ಮತ್ತು ತರಕಾರಿ ಮಾರುಕಟ್ಟೆಯನ್ನು ಅಭಿವೃದ್ಧಿ ಪಡಿಸುವ ಬಗ್ಗೆ

26(42) ಶ್ರೀ ನಾಡಗೌಡ ವೆಂಕಟರಾವ್(ಸಿಂಧನೂರು)

ಶ್ರೀ ಶಿವರಾಜ್ ಎಸ್ ತಂಗಡಗಿ (ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು)

ಕ.ವಿ.ಸ-ಕ.ಪ್ರ.(ಪ್ರ)-೦

ಅ) ರಾಯಚೂರು ಜಿಲ್ಲೆ ಸಿಂಧನೂರು ಪಟ್ಟಣದಲ್ಲಿ ಎಪಿಎಂಸಿ ವತಿಯಿಂದ ಹಣ್ಣು ಮತ್ತು ತರಕಾರಿ ಮಾರುಕಟ್ಟೆಯನ್ನು ಅಭಿವೃದ್ಧಿಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸಿಂಧನೂರು ಇವರು ಹಣ್ಣು ಮತ್ತು ತರಕಾರಿ ಮಾರುಕಟ್ಟೆಯನ್ನು ರಾಷ್ಟ್ರೀಯ ತೋಟಗಾರಿಕೆ ಮಿನಿ ಯೋಜನೆಯಡಿಯಲ್ಲಿ ಅಭಿವೃದ್ಧಿಪಡಿಸುವ ಯೋಜನೆಗೆ ದಿನಾಂಕ:21/02/2008 ರಂದು ಅನುಮೋದನೆ ನೀಡಿದೆ.

ಆ) ಹಾಗಿದ್ದಲ್ಲಿ, ಈ ಯೋಜನೆಯನ್ನು ಎಂದು ಪ್ರಾರಂಭಿಸಲಾಗುವುದು;

ದಿನಾಂಕ:12/01/2009 ರಂದು ಟೆಂಡರ್ ಕರೆಯಲಾಗಿದೆ. ದಿನಾಂಕ:22/05/2009 ರಂದು ಟೆಂಡರ್‌ಗಳನ್ನು ತೆರೆಯಲಾಗಿದೆ. ಒಂದೇ ಟೆಂಡರ್ ಸ್ವೀಕೃತವಾಗಿದ್ದು, ಸದರಿ ಟೆಂಡರ್‌ನಲ್ಲಿ ಭಾಗವಹಿಸಿದ್ದ ಗುತ್ತಿಗೆದಾರರು ತಾಂತ್ರಿಕವಾಗಿ ಅರ್ಹರಿಲ್ಲದೆ ಇರುವುದರಿಂದ ಸದರಿ ಟೆಂಡರ್‌ನ್ನು ದಿನಾಂಕ:04/07/2009 ರಂದು ತಿರಸ್ಕರಿಸಲಾಗಿದೆ.

ಮರು ಟೆಂಡರ್ ಪ್ರಕ್ರಿಯೆ ಮುಗಿದ ನಂತರ ಯೋಜನೆಯನ್ನು ಪ್ರಾರಂಭಿಸಲಾಗುವುದು.

ಇ) ಈ ಯೋಜನೆಗೆ ಸರ್ಕಾರಕ್ಕೆ ತಗಲುವ ವೆಚ್ಚ ಎಷ್ಟು; ಈ ಯೋಜನೆಯನ್ನು ಕೂಡಲೇ ಕಾರ್ಯಗತಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

<u>ಯೋಜನೆಯ ವಿವರಗಳು:</u>

ಸಿಂಧನೂರು ಮಾರುಕಟ್ಟೆ ಸಮಿತಿ ಒದಗಿಸುವ ಹಣ :ರೂ.255.00 ಲಕ್ಷ
ರಾಷ್ಟ್ರೀಯ ತೋಟಗಾರಿಕ ಮಿಷನ್ ಸಂಸ್ಥೆ ಸಬ್ಸಿಡಿ ಹಣ :ರೂ.75.00 ಲಕ್ಷ
ಒಟ್ಟು ಯೋಜನಾ ವೆಚ್ಚ :ರೂ.330.00 ಲಕ್ಷ

ಮರು ಟೆಂಡರ್ ಪ್ರಕ್ರಿಯೆಯನ್ನು ನಿಯಮಾನುಸಾರ ಪೂರ್ಣಗೊಳಿಸಿ ಯೋಜನೆಯನ್ನು ಅನುಷ್ಠಾನ ಗೊಳಿಸಲಾಗುವುದು.

ಶ್ರೀ ನಾಡಗೌಡ ವೆಂಕಟರಾವ್: ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ ಆದರೆ ಈ ಯೋಜನೆಗೆ ಅನುಮೋದನೆಯನ್ನು ಕೊಟ್ಟಿದ್ದಾರೆ ಈ ಟೆಂಡರ್ ಪ್ರಕ್ರಿಯೆ ಪ್ರಾರಂಭ ಮಾಡಿದ್ದಾರೆ ಸಿಂಗಲ್ ಟೆಂಡರ್ ಇರುವುದರಿಂದ ಅದು ತಿರಸ್ಕೃತವಾಗಿದೆಯೆಂದು ತಾವು ಹೇಳಿದ್ದೀರಿ. ಆ ಕಾರಣಕ್ಕಾಗಿ ಬಹಳ ಶೀಘ್ರದಲ್ಲಿ ಮತ್ತೆ ಟೆಂಡರ್ ಕರೆದು ಆ ಯೋಜನೆಯನ್ನು ಪ್ರಾರಂಭ ಮಾಡಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಶಿವರಾಜ್ ಎಸ್.ತಂಗಡಗಿ: ಆದಷ್ಟು ಬೇಗನೆ ಟೆಂಡರ್ ಕರೆದು ಆ ಯೋಜನೆಯನ್ನು ಪ್ರಾರಂಭಿಸುತ್ತೇನೆ.